ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು

2. ವಿಷಯ: ಅನುಕಂಪದ ಆಧಾರದ ಮೇಲೆ ಸರ್ಕಾರಿ ನೌಕರಿ ಕೊಡುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೇ, ಸರ್ಕಾರಿ ಸೇವೆಯಲ್ಲಿರುವಾಗ ಸರ್ಕಾರಿ ನೌಕರರು ಸತ್ತುಹೋದರೆ ಅವರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ಕೊಡುವ ಒಂದು ಪದ್ಧತಿ ಇದೆ. ಇದಕ್ಕೆ ನಿಯಮಾವಳಿಗಳನ್ನು ನಾವು ಮಾಡಿಕೊಂಡಿದ್ದೇವೆ. ಆದರೆ ಕೆಲವು ಅಧಿಕಾರಿಗಳು ಈ ನಿಯಮಾವಳಿಗಳನ್ನು ಪಾಲಿಸಿಲ್ಲ.

ಮಾನ್ಯ ಮುಖ್ಯಮಂತ್ರಿಗಳು statement ಪ್ರತಿಯನ್ನು ನನಗೆ ಈಗ ಕೊಟ್ಟಿದ್ದಾರೆ. ಅದನ್ನು ನಾನು ಇನ್ನೂ ನೋಡಿಲ್ಲ. ಶ್ರೀ ಟಿ.ಬಿ. ಮಹೇಶ್ ಕುಮಾರ್ ಎಂಬುವವರು ಭೂ ಮಾಪಕರಾಗಿದ್ದು ಅವರು ಸೇವಾವಧಿಯಲ್ಲಿ ಮರಣ ಹೊಂದಿರುತ್ತಾರೆ. ಟಿ. ನರಸೀಪುರದ ಶ್ರೀ ಜಿ.ಪಿ. ಮಂಜುನಾಥ್ ಎಂಬುವವರಿಗೆ ಅನುಕಂಪದ ಆಧಾರದ ಮೇಲೆ ನೌಕರಿಯನ್ನು ಕೊಡಬೇಕಾಗಿತ್ತು. ಆದರೆ ಇವರು ಮರಣ ಹೊಂದಿರುವವರ ಸೋದರ ಆಗಿರುವುದರಿಂದ ನೌಕರಿಯನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಕೆಲವು ಅಧಿಕಾರಿಗಳು ನಿಯಮಾವಳಿಗಳನ್ನು ಪಾಲಿಸದೆ ಹಿಂಬರಹವನ್ನು ಕೊಟ್ಟಿದ್ದಾರೆ. ಅವಿವಾಹಿತ ನೌಕರರು ಸತ್ತರೆ ಅವರ ಸೋದರರು ಅವಲಂಬಿತರಾಗಿದ್ದರೆ ಅವರಿಗೆ ಕೆಲಸ ಕೊಡಬೇಕೆಂದು ನಿಯಮಾವಳಿಗಳಲ್ಲಿ ಸ್ಪಷ್ಟವಾಗಿದೆ. ಅವಿವಾಹಿತ ಮಹಿಳೆ ಮರಣ ಹೊಂದಿದರೆ ಅವರ ಸೋದರ ಅಥವಾ ಸೋದರಿಗೆ ಕೆಲಸವನ್ನು ಕೊಡಬೇಕೆಂದು ನಿಯಮಾವಳಿಗಳಿದೆ. ಈ ರೀತಿ ನಿಯಮಾವಳಿಗಳಿದ್ದರು ಅಧಿಕಾರಿಗಳು ಈ ರೀತಿಯಾದ ಹಿಂಬರಹವನ್ನು ಕೊಟ್ಟಿದ್ದಾರೆ. ಈ ರೀತಿ ಅನೇಕ ಜನರಿಗೆ ಅನ್ಯಾಯವಾಗುತ್ತಿದೆ. ಸರ್ಕಾರ ಮಾಡಿರುವ ನಿಯಮಾವಳಿಗಳನ್ನು

ಪಾಲನೆ ಮಾಡಬೇಕಾಗಿರುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ. ಇದನ್ನು ಪಾಲನೆ ಮಾಡದೆ ನಿಯಮಾವಳಿಗಳನ್ನು ನೋಡದೆ ಹಿಂಬರಹ ಕೊಟ್ಟರೆ ಜನರಿಗೆ ಅನ್ಯಾಯವಾಗುತ್ತದೆ. ಆದುದರಿಂದ, ನಿಯಮಾವಳಿಗಳನ್ನು ಪಾಲನೆ ಮಾಡಬೇಕು. ಇಂತಹ ಸನ್ನಿವೇಶಗಳಲ್ಲಿ ಉದ್ಯೋಗ ಕೊಡುವಂತಹ ಕೆಲಸವನ್ನು ಮಾಬಬೇಕೆಂಬ ಸ್ಪಷ್ಟವಾದ clarification ಅಧಿಕಾರಿಗಳಿಗೆ ಹೋಗಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996, ದಿನಾಂಕ: 13.9.1996ರಿಂದ ಜಾರಿಗೆ ಬಂದಿರುತ್ತದೆ. ಈ ನಿಯಮಗಳನ್ವಯ, ಸರ್ಕಾರಿ ನೌಕರರು ಸೇವೆಯಲ್ಲಿರುವಾಗಲೇ ಮೃತರಾದಲ್ಲಿ ಅವರ ಅವಲಂಬಿತರು ಅನುಕಂಪದ ಆಧಾರದ ಮೇಲೆ ಅವರ ವಿದ್ಯಾರ್ಹತೆಗೆ ಅನುಗುಣವಾಗಿ ಗ್ರೂಪ್-ಸಿ ಅಥವಾ ಗ್ರೂಪ್-ಡಿ ಹುದ್ದೆಗೆ ನೇಮಕಾತಿ ಹೊಂದಲು ಆಸ್ಪದವಿರುತ್ತದೆ. ಈ ನಿಯಮಗಳ ನಿಯಮ 3ರಲ್ಲಿ ಅನುಕಂಪದ ನೇಮಕಾತಿ ಹೊಂದಲು ಅರ್ಹತೆಯನ್ನು, ನಿಯಮ 4ರಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಲು ಷರತ್ತುಗಳನ್ನು ವಿಧಿಸಲಾಗಿದೆ. ನಿಯಮ 5ರಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದುವಂತೆ ಕೋರಿ ಅರ್ಜಿ ಸಲ್ಲಿಸಲು ಕಾಲಮಿತಿಯನ್ನು ನಿಗದಿಪಡಿಸಲಾಗಿರುತ್ತದೆ. ಈ ನಿಯಮಗಳ ನಿಯಮ 6ರನ್ವಯ ಅಂತಹ ನೇಮಕಾತಿಯನ್ನು ಸಾಧ್ಯವಾದಷ್ಟುಮಟ್ಟಿಗೆ ಅರ್ಜಿ ಸ್ವೀಕೃತವಾದ 3 ತಿಂಗಳೊಳಗಾಗಿ ಮಾಡತಕ್ಕದ್ದಾಗಿದೆ.

ಕೆಲವು ಸಂದರ್ಭಗಳಲ್ಲಿ ಮೃತ ಸರ್ಕಾರಿ ನೌಕರರ ಮಾತೃ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಲು ಗ್ರೂಪ್–ಸಿ ಅಥವಾ ಗ್ರೂಪ್–ಡಿ ಹುದ್ದೆಗಳು ಖಾಲಿ ಇರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ನೇಮಕಾತಿ ನೀಡುವಲ್ಲಿ ಉಂಟಾಗಬಹುದಾದ ವಿಳಂಬವನ್ನು ತಡೆಗಟ್ಟಲು ಅಭ್ಯರ್ಥಿಗಳ ಪ್ರಸ್ತಾವನೆಗಳನ್ನು ಆ ವಿಭಾಗದ ಪ್ರಾದೇಶಿಕ ಆಯುಕ್ತರಿಗೆ ಕಳುಹಿಸುವಂತೆ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ದಿನಾಂಕ: 24.11.2006ರ ಅಧಿಕೃತಜ್ಞಾಪನ ಸಂಖ್ಯೆ: ಸಿಆಸುಇ 48 ಸೇಅನೇ 2006ರಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ. ಎಲ್ಲಾ ಇಲಾಖೆಗಳ ಮುಖ್ಯಸ್ಥರುಗಳು ಖಾಲಿ ಇರುವ ಗ್ರೂಪ್–ಸಿ ಮತ್ತು ಗೂಪ್–ಡಿ ಹುದ್ದೆಗಳ ವಿವರಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿ ಮತ್ತು ಮುಂಬಡ್ತಿ ರಿಕ್ತಸ್ಥಾನಗಳೆಂದು ವರ್ಗೀಕರಿಸಿ ನೇರ ನೇಮಕಾತಿಗಾಗಿ ವರ್ಗೀಕರಿಸಲಾದ ರಿಕ್ತಸ್ಥಾನಗಳ ವಿವರಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಸಂಬಂಧಿಸಿದ ಪ್ರಾದೇಶಿಕ ಆಯುಕ್ತರಿಗೆ ನೀಡಬೇಕು. ಹಾಗೂ ಈ ನೇರ ನೇಮಕಾತಿ ರಿಕ್ತಸ್ಥಾನಗಳನ್ನು ನೇರ ನೇಮಕಾತಿಗಾಗಿ ಆಯ್ಕೆ ಪ್ರಾಧಿಕಾರಕ್ಕೆ ಬಿಡುಗಡೆ ಮಾಡುವ ಮುನ್ನ ಅನುಕಂಪದ ಆಧಾರದ ನೇಮಕಾತಿ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳ ಬಗ್ಗೆ ಪ್ರಾದೇಶಿಕ ಆಯುಕ್ತರೊಂದಿಗೆ ಸಮಾಲೋಚಿಸಬೇಕೆಂದು ದಿನಾಂಕ: 25.3.2009ರ ಸುತ್ತೋಲೆ ಸಂಖ್ಯೆ: ಸಿಆಸುಇ 81 ಸೇಅನೇ 2008ರಲ್ಲಿ ಸೂಚನೆಗಳನ್ನು ನೀಡಲಾಗಿದೆ.

ಮೇಲ್ಕಂಡ ಹಿನ್ನೆಲೆಯಲ್ಲಿ ಅನುಕಂಪದ ಆಧಾರದ ನೇಮಕಾತಿ ನೀಡುವಲ್ಲಿ ವಿಳಂಬವಾಗುವ ಸಾಧ್ಯತೆಗಳು ವಿರಳ, ಆದರೂ ಕೆಲವು ಸಂದರ್ಭಗಳಲ್ಲಿ ಅಭ್ಯರ್ಥಿಗಳು ಅವಶ್ಯಕವಿರುವ ದಾಖಲೆಗಳನ್ನು ಒದಗಿಸದೇ ಇದ್ದಲ್ಲಿ ಅಂತಹ ಸಂದರ್ಭಗಳಲ್ಲಿ

ಮಾತ್ರ ವಿಳಂಬವಾಗುವ ಸಾಧ್ಯತೆಗಳಿರುತ್ತವೆ. ಆದಾಗ್ಯೂ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವಾಗ ವಿಳಂಬವನ್ನು ತಪ್ಪಿಸಲು ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಮತ್ತೊಮ್ಮೆ ಸೂಚನೆಗಳನ್ನು ನೀಡಲಾಗುವುದು.

ಮಾನ್ಯ ವಿರೋಧ ಪಕ್ಷದ ನಾಯಕರು ಶೂನ್ಯವೇಳೆಯಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಲಿಖಿತ ಮೂಲಕ ಉತ್ತರವನ್ನು ಒದಗಿಸಿದ್ದೇವೆ. ಟಿ. ನರಸೀಪುರದ ಶ್ರೀ ಜಿ.ಪಿ. ಮಂಜುನಾಥ್ ರವರ ವಿಶೇಷವಾದ ಪ್ರಕರಣವನ್ನು ಸದನದ ಗಮನಕ್ಕೆ ಪ್ರತಿ ಪಕ್ಷದ ನಾಯಕರು ತಂದಿದ್ದು, ಮೃತ ನೌಕರರ ಸಹೋದರರಾಗಿರುವುದರಿಂದ ಅವರಿಗೆ ನೌಕರಿ ಕೊಡುವುದುಕ್ಕೆ ಬರುವುದಿಲ್ಲವೆಂದು ಹಿಂಬರಹ ಕೊಟ್ಟಿದ್ದಾರೆಂದು ಹೇಳಿದ್ದಾರೆ. ತಾವು ಹೇಳಿದ ಹಾಗೆ ನಿಯಮಾವಳಿಗಳು ಸ್ಪಷ್ಟವಾಗಿದೆ. ಈ ವಿಶೇಷ ಪ್ರಸಂಗವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಸ್ಪಷ್ಟವಾಗಿ ಅಧಿಕಾರಿಗಳಿಗೆ ನಿರ್ದೇಶನ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

3. ವಿಷಯ: ಸಕಲೇಶಪುರ ತಾಲ್ಲೂಕಿನಲ್ಲಿ ಹೆಚ್ಚುತ್ತಿರುವ ಅನೆಗಳ ಹಾವಳಿಯನ್ನು ತಪ್ಪಿಸುವುದಕ್ಕೆ ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ): ಮಾನ್ಯ ಅಧ್ಯಕ್ಷರೆ, ಈಗಾಗಲೇ ನನ್ನ ಮತಕ್ಷೇತ್ರವಾದ ಸಕಲೇಶಪುರ ತಾಲ್ಲೂಕಿನ ಕಾಡುಮನೆ ಎಸ್ಟೇಟ್‌ನಲ್ಲಿ ನೆನ್ನೆಯ ದಿವಸ ಮಹಿಳಾ ಕಾರ್ಮಿಕರು ಆನೆ ದಾಳಿಯಿಂದ ಸಾವಿಗೀಡಾಗಿದ್ದಾರೆ. ಇದು ಮಲೆನಾಡು ಭಾಗದಲ್ಲಿ ನಿರಂತರವಾಗಿ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಹೇಳಿ, ಕೊನೆಗೆ ಅನೆಗಳ ಟಾಸ್ಕ್‌ಫೋರ್ಸ್ ಸಮಿತಿ ಮಾಡಿದ್ದು, ಈ ಸಮಿತಿ ನ್ಯಾಯಾಲಯಕ್ಕೆ ವರದಿಯನ್ನು ಕೊಟ್ಟಿದೆ. ಟಾಸ್ಕ್‌ಫೋರ್ಸ್ ಸಮಿತಿ